# ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಟಿ.ಎ. ಶರವಣ, ಇವರು ನಿಯಮ-72ರಡಿ ಗಮನ ಸೆಳೆಯುವ ಸೂಚನಾ ಪತ್ರಕ್ಕೆ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಉತ್ತರ

**ಪ್ರಶ್ನೆ:**

ತುಳು ಭಾಷೆ ಮುಖ್ಯವಾಗಿ ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ ಮತ್ತು ಕರ್ನಾಟಕದ ಉಡುಪಿ ಮತ್ತು ಕೇರಳದ ಕಾಸರಗೋಡು ಜಿಲ್ಲೆಗಳಲ್ಲಿ ಮಾತನಾಡುವ ದ್ರಾವಿಡ ಭಾಷೆಯಾಗಿದೆ. ಹಾಗೂ ಚಿಕ್ಕಮಗಳೂರು ಶಿವಮೊಗ್ಗ ಜಿಲ್ಲೆಯ ಮಲೆನಾಡು ಪ್ರದೇಶಗಳಲ್ಲಿ ಹೆಚ್ಚಾಗಿ ಮಾತನಾಡಲಾಗುತ್ತಿದೆ. ದೇಶಾದ್ಯಂತ ಸುಮಾರು 70 ಲಕ್ಷಕ್ಕೂ ಹೆಚ್ಚು ಜನರು ತುಳುಭಾಷೆಯನ್ನು ಮಾತನಾಡುತ್ತಿದ್ದಾರೆ. ತುಳು 2000 ವರ್ಷಗಳ ಇತಿಹಾಸ ಹೊಂದಿರುವ ಆರಂಭಿಕ ದ್ರಾವಿಡ ಭಾಷೆಗಳಲ್ಲಿ ಒಂದಾಗಿದೆ ಅಲ್ಲದೆ, ತುಳು ಭಾಷೆಯು ಪಾಡ್ದನ, ಮತ್ತು ಸಾಂಪ್ರದಾಯಿಕ ಜಾನಪದ ರಂಗಭೂಮಿ ಯಕ್ಷಗಾನದಂತಹ ಜಾನಪದ ಗೀತೆಗಳೊಂದಿಗೆ ಶ್ರೀಮಂತ ಮೌಖಿಕ ಸಾಹಿತ್ಯ ಪರಂಪರೆಯನ್ನು ಹೊಂದಿದೆ., ತುಳು ಭಾಷೆಯನ್ನು ಆ ರಾಜ್ಯದ ಎರಡನೇ ಅಧಿಕೃತ ಭಾಷೆ ಎಂದು ಘೋಷಣೆ ಮಾಡಲು ಮೋಹನ್ ಆಳ್ವ ನೇತೃದ ಸಮಿತಿಗಳನ್ನು ರಚನೆ ಮಾಡಿ ಮತ್ತು ವರದಿಯನ್ನು ಸಹ ಸಲ್ಲಿಸಿದೆ ಆದಷ್ಟು ಬೇಗನೆ ಕಾನೂನು ಇಲಾಖೆಯು ಇತರೆ ರಾಜ್ಯಗಳು ಎರಡನೇ ಅಧಿಕೃತ ಭಾಷೆಯನ್ನಾಗಿ ಅಳವಡಿಸಿಕೊಳ್ಳಲು ಸೂಕ್ತ ಕ್ರಮ ಕೈಗೊಂಡು ಬಿಹಾರ, ಅಂಧ್ರಪ್ರದೇಶ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳನ್ನು ಮಾದರಿಯಲ್ಲಿ ತುಳು ಭಾಷೆಯನ್ನು ಕರ್ನಾಟಕದ 2 ನೇ ಅಧಿಕೃತ ಭಾಷೆಯನ್ನಾಗಿ ಘೋಷಿಸಬೇಕು. ಇದು ಕರಾವಳಿ ಪ್ರದೇಶದ ಸಾಂಸ್ಕೃತಿಕ ಮತ್ತು ಐತಿಹಾಸಿಕ ಗುರುತನ್ನು ಹೆಚ್ಚು ಸೂಕ್ತವಾಗಿ ಪ್ರತಿಬಿಂಬಿಸಲಿದೆ. ಈ ಮನವಿಗೆ ಗ್ಲೋಬಲ್ ಅಲಯನ್ಸ್ ಆಫ್ ತುಳು ಅಸೋಸಿಯೇಷನ್ಸ್ (GATA), ಟೀಮ್ ಐಲೆಸಾ (ILESA) ಬೆಂಬಲ ವ್ಯಕ್ತಪಡಿಸಿವೆ.

ಆದುದರಿಂದ, ಶ್ರೀಮಂತ ಪರಂಪರೆ ಹಾಗೂ ತನ್ನದೇ ಆದ ಇತಿಹಾಸವನ್ನು ಹೊಂದಿರುವ ತುಳು ಭಾಷೆಗೆ ಆದಷ್ಟು ಬೇಗನೆ ಸರ್ಕಾರವು ತುಳು ಭಾಷೆಯನ್ನು 2ನೇ ಅಧಿಕೃತ ಭಾಷೆಯನ್ನಾಗಿ ಘೋಷಿಸಲು ಸೂಕ್ತ ಕಾನೂನು ಕ್ರಮಕೈಗೊಳ್ಳಬೇಕೆಂದು ಕೋರಿದೆ.

**ಉತ್ತರ:**

ಡಾ. ಮೋಹನ್ ಆಳ್ವ ಇವರ ಅಧ್ಯಕ್ಷತೆಯಲ್ಲಿ ರಚಿಸಿರುವ ಸಮಿತಿಯು ತುಳು ಭಾಷೆಯ ಸ್ವರೂಪ ಮತ್ತು ಇತಿಹಾಸ ತುಳು ಸಾಹಿತ್ಯ ಪರಂಪರ ತುಳು ಲಿಪಿ, ಪ್ರಾಚೀನ ತುಳು ಸಾಹಿತ್ಯ ಆಧುನಿಕ ತುಳು ಸಾಹಿತ್ಯ ಸಂಸ್ಕೃತಿ, ತುಳು ಶಾಸನಗಳ ಕುರಿತು ಅಧ್ಯಯನ ನಡೆಸಿ ದಿನಾಂಕ:14.02.2023ರಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಿರುತ್ತದೆ.

ಡಾ. ಮೋಹನ್ ಆಳ್ವ ಇವರ ಅಧ್ಯಕ್ಷತೆಯಲ್ಲಿ ರಚಿಸಿರುವ ಸಮಿತಿಯ ವರದಿಯ ಕುರಿತು ಕಾನೂನು ಇಲಾಖೆಯು ಈ ಕೆಳಕಂಡಂತೆ ಅಭಿಪ್ರಾಯ ನೀಡಿರುತ್ತದೆ:

"ನಮ್ಮ ಕರ್ನಾಟಕ ರಾಜ್ಯದಲ್ಲಿ ಕನ್ನಡವೇ ಅಧಿಕೃತ ಆಡಳಿತ ಭಾಷೆಯಾಗಿರುತ್ತದೆ. ಅದೇ ರೀತಿ ಇಂಗ್ಲೀಷ್ ಹೆಚ್ಚುವರಿ ಆಡಳಿತ ಭಾಷೆಯಾಗಿರುತ್ತದೆ. ಯಾವುದೇ ರಾಜ್ಯ ಸರ್ಕಾರ ಒಂದು ಭಾಷೆಯನ್ನು ಆ ರಾಜ್ಯದ ಅಧಿಕೃತ ಭಾಷೆಯೆಂದು ಘೋಷಿಸಲು ಭಾರತ ಸಂವಿಧಾನದ ಅನುಚ್ಛೇದ 345 ರಲ್ಲಿ ಅವಕಾಶ ಮಾಡಿಕೊಟ್ಟಿದೆ. ಈ ಪ್ರಕಾರ ಕ್ರಮವಹಿಸುವ ಪೂರ್ವದಲ್ಲಿ ಸದರಿ ರಾಜ್ಯಗಳು ಈ ಬಗ್ಗೆ ಕಾನೂನಾತ್ಮಕವಾಗಿ ಸಮಿತಿಗಳನ್ನು ರಚನೆ ಮಾಡಿ ಮತ್ತು ವರದಿಯನ್ನು ಪಡೆದುಕೊಂಡು ಆನಂತರ ಮುಂದುವರಿಯ ಬಹುದಾಗಿರುತ್ತದೆ. ಅದೇ ರೀತಿ ತುಳು ಭಾಷೆಯನ್ನು ರಾಜ್ಯದ ಅಧಿಕೃತ ಭಾಷೆಯೆಂದು ಘೋಷಿಸುವ ಬಗ್ಗೆ ಆಡಳಿತ ಇಲಾಖೆಯು ಭಾರತ ಸಂವಿಧಾನದ ಅನುಚ್ಛೇದ 345ರ ಪ್ರಕಾರ ಕ್ರಮವಹಿಸಬಹುದಾಗಿರುತ್ತದೆ ಮತ್ತು ಈ ರೀತಿ ಕ್ರಮವಹಿಸುವ ಪೂರ್ವದಲ್ಲಿ ಸದರಿ ಭಾಷೆಗೆ ಸಂಬಂಧಿಸಿದಂತೆ, ಸೂಕ್ತವಾದ ಅಧ್ಯಯನವನ್ನು ಮಾಡಲು ಸಮಿತಿಯನ್ನು ರಚಿಸಿ, ಸದರಿ ಸಮಿತಿಯ ವರದಿಯ ಆಧಾರದ ಮೇರೆಗೆ ಹಾಗೂ ವಿವಿಧ ರಾಜ್ಯಗಳಲ್ಲಿ ಎರಡನೇ ಭಾಷೆಯನ್ನು ಘೋಷಿಸಿರುವ ಬಗ್ಗೆ ಅಧ್ಯಯನ ನಡೆಸಿ, ಅನಂತರ ಸೂಕ್ತವಾಗಿ ಮುಂದುವರಿಯಬಹುದಾಗಿರುತ್ತದೆ."

ಕಾನೂನು ಇಲಾಖೆಯ ಅಭಿಪ್ರಾಯದಂತೆ, ತುಳು ಭಾಷೆಯನ್ನು ಕರ್ನಾಟಕ ರಾಜ್ಯದ ಎರಡನೇ ಅಧಿಕೃತ ಭಾಷೆಯೆಂದು ಘೋಷಣೆ ಮಾಡುವ ಕುರಿತು, ವಿವಿಧ ರಾಜ್ಯಗಳಲ್ಲಿ ಎರಡನೇ ಭಾಷೆಯನ್ನು ಅಧಿಕೃತ ಭಾಷೆಯೆಂದು ಘೋಷಿಸಲು ಅನುಸರಿಸಿರುವ ಮಾನದಂಡಗಳ ಕುರಿತು ಸಂಪೂರ್ಣವಾಗಿ ಅಧ್ಯಯನ ನಡೆಸಿ, ಮೂರು ತಿಂಗಳೊಳಗೆ ವರದಿ ನೀಡುವಂತೆ ಸೂಚಿಸಿ, ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಅಧ್ಯಯನ ತಂಡವನ್ನು ರಚಿಸಿ, ಆಂಧ್ರಪ್ರದೇಶ ರಾಜ್ಯಕ್ಕೆ ನಿಯೋಜಿಸಲು ಸರ್ಕಾರದ ಆದೇಶ ಸಂಖ್ಯೆ: ಕಸಂವಾ 36 ಕೆಓಎಲ್ ಆಕ 2021 (ಭಾಗ-2) ದಿನಾಂಕ:30.07.2025ರಲ್ಲಿ ಅನುಮತಿ ನೀಡಿ ಆದೇಶಿಸಲಾಗಿರುತ್ತದೆ (ಪ್ರತಿ ಲಗತ್ತಿಸಿದೆ).

**ಸಂಖ್ಯೆ: ಕಸಂವಾ 84 ಕೆಓಎಲ್ ಆಕ 2025**

**(ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು

# ಕರ್ನಾಟಕ ಸರ್ಕಾರ

ಸಂಖ್ಯೆ: ಕಸಂವಾ 36 ಕೆಒಎಲ್ಆಕ 2021 (ಭಾಗ-2)

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಡಾ॥ ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 30.07.2025.

## ಅಧಿಸೂಚನೆ

ತುಳು ಭಾಷೆಯನ್ನು ಕರ್ನಾಟಕ ರಾಜ್ಯದ ಎರಡನೇ ಅಧಿಕೃತ ಭಾಷೆಯೆಂದು ಘೋಷಣೆ ಮಾಡುವ ಕುರಿತು ವಿವಿಧ ರಾಜ್ಯಗಳಲ್ಲಿ ಎರಡನೇ ಭಾಷೆಯನ್ನು ಅಧಿಕೃತ ಭಾಷೆಯೆಂದು ಘೋಷಿಸಲು ಅನುಸರಿಸಿರುವ ಮಾನದಂಡಗಳ ಕುರಿತು ಸಂಪೂರ್ಣವಾಗಿ ಅಧ್ಯಯನ ನಡೆಸಲು ಈ ಕೆಳಕಂಡಂತೆ ಅಧ್ಯಯನ ತಂಡವನ್ನು ರಚಿಸಿ ಆಂಧ್ರಪ್ರದೇಶ ರಾಜ್ಯಕ್ಕೆ ನಿಯೋಜಿಸಲು ಅನುಮತಿ ನೀಡಿ ಆದೇಶಿಸಿದ.

| ಕ್ರ. ಸಂ | ಹೆಸರು ಮತ್ತು ಹುದ್ದೆ | | ವಿಳಾಸ | ದೂರವಾಣಿ/ ಮೊಬೈಲ್ ಸಂಖ್ಯೆ/ಇ-ಮೇಲ್ ವಿಳಾಸ |
|---|---|---|---|---|
| 1 | ಶ್ರೀಮತಿ ಗಾಯಿತ್ರಿ ಕೆ.ಎಂ, ಭಾ.ಆ.ಸೇ., ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ | ಅಧ್ಯಕ್ಷರು | ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-560002 | 080- 22214379 / 22241325 \| 9743304202 kanbhavblr@gmail.com |
| 2 | ಶ್ರೀಮತಿ ವನಿತ, ಸರ್ಕಾರದ ಉಪ ಕಾರ್ಯದರ್ಶಿ (ಆಡಳಿತ-2), ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ | ಸದಸ್ಯರು | ಕೊಠಡಿ ಸಂ:403, 4ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560001. | ಮೊ:9242945312 ದೂ:080-22032012 dsadmn2law@gmail.com |
| 3 | ಶ್ರೀ ಮೂರ್ತಿ ಕೆ.ಎನ್, ಸರ್ಕಾರದ ಉಪ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ) | ಸದಸ್ಯರು | ಕೊಠಡಿ ಸಂ:424, 4ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560001. | ದೂ:080-22032391 as-dparadmin@karnataka.gov.in |
| 4 | ಶ್ರೀ ತಾರಾನಾಥ್ ಗಟ್ಟಿ ಕಾಪಿಕಾಡ್, ಅಧ್ಯಕ್ಷರು, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ | ಸದಸ್ಯರು | ತುಳುಭವನ, ಪೋಸ್ಟ್: ಅಶೋಕನಗರ, ಉರ್ವ ಸ್ಟೋರ್, ಮಂಗಳೂರು-575006. | ದೂ.0824-2459389 Tulu.academy@yahoo.co.in |

E|10632948|2025

....2/-

| | | | | |
|---|---|---|---|---|
| 5 | ಶ್ರೀ ಸುಧಾಕರ ಶೆಟ್ಟಿ,<br>ಸದಸ್ಯರು,<br>ಯಕ್ಷಗಾನ ಅಕಾಡೆಮಿ | ಸದಸ್ಯರು | ಕನ್ನಡ ಭವನ,<br>2ನೇ ಮಹಡಿ, ಜೆ.ಸಿ.ರಸ್ತೆ,<br>ಬೆಂಗಳೂರು-560002 | ಮೊ:9964669218<br>marscininetwork1@gmail.com |

ಮುಂದುವರೆದು, ಸದರಿ ಅಧ್ಯಯನ ತಂಡವು ಆದೇಶ ಹೊರಡಿಸಿದ ದಿನಾಂಕದಿಂದ ಮೂರು ತಿಂಗಳೊಳಗೆ ವರದಿಯನ್ನು ನೀಡತಕ್ಕದ್ದು ಹಾಗೂ ಅಧ್ಯಯನ ತಂಡದಲ್ಲಿರುವ ಅಧ್ಯಕ್ಷರು / ಸದಸ್ಯರಿಗೆ ತಗಲುವ ಅಧ್ಯಯನ ಪ್ರವಾಸದ ವೆಚ್ಚವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖಾ ವತಿಯಿಂದ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಕೆ.ಆರ್. ರಮೇಶ್ 30/07/2025

(ಕೆ.ಆರ್. ರಮೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
(ಆಡಳಿತ ಕನ್ನಡ)

<u>ಇವರಿಗೆ :</u>

1. ಮಹಾಲೇಖಾಪಾಲರು (ಎ&ಇ), (ಜಿ&ಎಸ್.ಎಸ್.ಎ), (ಇ&ಆರ್.ಎಸ್.ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ಆಯುಕ್ತರು, ಖಜಾನೆ ಆಯುಕ್ತಾಲಯ, ಕೆ.ಪಿ.ಸಿ.ಎಲ್ ಕಟ್ಟಡ, 6ನೇ ಮಹಡಿ, ಔಷಧ ನಿಯಂತ್ರಣ ಕಚೇರಿ, ಅರಮನೆ ರಸ್ತೆ, ಬೆಂಗಳೂರು.
3. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು
4. ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿ, ಕಾನೂನು, ನ್ಯಾಯ ಮತ್ತು ಹಕ್ಕುಗಳ ಇಲಾಖೆ, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-7 / ಗಣಕ ಕೋಶ), ವಿಧಾನಸೌಧ, ಬೆಂಗಳೂರು.
7. ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಕನ್ನಡ ಮತ್ತು ಸಂಸ್ಕೃತಿ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
8. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಕಾಸಸೌಧ, ಬೆಂಗಳೂರು.

9. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ, ವಿಕಾಸಸೌಧ, ಬೆಂಗಳೂರು.
10. ಅಧ್ಯಯನದ ತಂಡದ ಅಧ್ಯಕ್ಷರು / ಸದಸ್ಯರು (ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಇವರ ಮುಖಾಂತರ)
11. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.